ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 3, Nov-Dec, 2022, Pp 1-5.**
**©*IIMRD*, Mysuru**

IIMRD JOURNALS

**www.iimrd.com**

# ಶಿವಶರಣ ಪಾಟೀಲ ಜಾವಳಿಯವರ ಕಾವ್ಯಗಳಲ್ಲಿ ಜನಪರ ಕಾಳಜಿ

**ವಿಠಲ***

*ಸಂಶೋಧನ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗ ವಿಶ್ವವಿದ್ಯಾಲಯ, ಕಲಬುರಗಿ.

***ಸಾರಾಂಶ: (Abstract)***

*ಕರ್ನಾಟಕದ ಪ್ರಮುಖ ಸಾಹಿತಿಗಳಲ್ಲಿ ಶಿವಶರಣ ಪಾಟೀಲ ಜಾವಳಿ ಒಬ್ಬರಾಗಿದ್ದಾರೆ. ಸಾಹಿತ್ಯ ಸಂಘಟನೆಗಳ ರೂವಾರಿ, ಪ್ರಯೋಗಶೀಲ ಚಿಂತಕರೂ ಹೌದು. ಹುಟ್ಟಿದ ನೆಲದ ಸತ್ವ ಹೀರಿಕೊಂಡು, ನಿಂತ ನೆಲದ ಸಂಸ್ಕೃತಿಯನ್ನು ಗೌರವಿಸಿ, ಪ್ರೀತಿಸುವುದರೊಂದಿಗೆ ಗಮನಾರ್ಹ ಚಿಂತನೆಗಳಿಂದ ಕಾವ್ಯ ಕೃಷಿ ಕೈಗೊಂಡಿದ್ದಾರೆ. ಬಂಡಾಯದ ಧೋರಣೆಯಲ್ಲಿಯೂ ಸಮಾಜಮುಖಿಯಾಗಿ ಚಿಂತಿಸುತ್ತಾ, ವಿನೂತನ ಶೈಲಿಯಯೊಂದಿಗೆ ಕಾವ್ಯ ಪರಂಪರೆಗೆ ಹೊಸ ತಿರುವು ನೀಡಿದ್ದಾರೆ. ಕಾವ್ಯವನ್ನು ಮಹಿಳಾಪರ ಕಾಳಜಿ, ಶೋಷಣೆ, ಸಾಮಾಜಿಕ ವಿಡಂಬನೆ, ಸಾಮಾಜಿಕ ಪ್ರಜ್ಞೆ, ರಾಜಕಾರಣ, ಹೀಗೆ ಐದು ನೆಲೆಗಳಲ್ಲಿ ವಿಂಗಡಿಸಿ, ಕಾವ್ಯದ ಕಾಳಜಿಯನ್ನು ಪ್ರಧಾನವಾಗಿ ಗುರುತಿಸಲಾಗಿದ್ದು, ಅವುಗಳಲ್ಲಿ ಸಾಂಪ್ರದಾಯಿಕ ದೃಷ್ಟಿಕೋನ, ಭಯ–ಭಕ್ತಿ ಪ್ರಯುಕ್ತ ಗೌರವ ಮತ್ತು ಭಾವುಕತನದ ಇದೆ. ಹಾಗೂ ಹೆಣ್ಣಿನ ಸೌಂದರ್ಯದ ಪರಿ ಹಾಗೂ ಮಾತೃತ್ವದ ವಿವಿಧ ರೂಪಗಳನ್ನು ಅದಮ್ಯ ಪರಿಕಲ್ಪನೆಯೊಂದಿಗೆ ಬಿಂಬಿಸುವುದನ್ನು ಕಾಣುತ್ತೇವೆ.*

***ಮುಖ್ಯಪದಗಳು (Keywords):*** *ಹೈದ್ರಬಾದ್ ಕರ್ನಾಟಕ, ಕನ್ನಡ ಸಾಹಿತ್ಯ, ಕಾವ್ಯಗಳು,* ಕಲಬುರಗಿ.

**ಪೀಠಿಕೆ**

***ಇವನಾರವ ಇವನಾರವ***
***ಇವನಾರವನೆಂದನೆಸದಿರಯ್ಯ. ಇವ ನಮ್ಮವ, ಇವ***
***ನಮ್ಮವ ಇವನಮ್ಮವನೆಂದನಿಸಯ್ಯ***
***ಕೂಡಲ ಸಂಗಮದೇವಯ್ಯ ನಿಮ್ಮ ಮನೆಯ ಮಗನೆಂದನಿಸಯ್ಯ***

ಕಲಬುರಗಿ ಬಿಸಿಲು ಕಲ್ಲುಗಳು ಬಯಲು ಸೀಮೆಯಲ್ಲಿ ಅರಳಿದ ಶ್ರೀ ಶಿವಶರಣ ಪಾಟೀಲ್ ಜಾವಳಿಯವರು ಕನ್ನಡ ಕಾವ್ಯಲೋಕ ಕಂಡ ಪ್ರತಿಭಾವಂತ ಕವಿಗಳು. ಇವರು ಕಾವ್ಯ ಪ್ರಕಾರವನ್ನು ತಮ್ಮ ಬದುಕಿನ ಮುಖ್ಯ ಆಯಾಮವನ್ನಾಗಿ ಮಾಡಿಕೊಂಡಿದ್ದರು. ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಜಾವಳಿ ಗ್ರಾಮದವರು, ನಿಷ್ಠ ಶರಣ ಸಂಸ್ಕೃತಿಯ ಕುಟುಂಬದಲ್ಲಿ ಮಾರ್ಚ 12, 1938ರಂದು ತಂದೆ ಬಸವಂತರಾಯ ಪಾಟೀಲ್ ತಾಯಿ ಲಕ್ಷ್ಮಿ ಅವರು ಉದರದಲ್ಲಿ ಜನಿಸಿದರು. ಕಲಬುರಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ತಮ್ಮ ಅಧಿಕಾರ ಅವಧಿಯಲ್ಲಿ ಕನ್ನಡ ಭವನ ನಿರ್ಮಿಸಿದರು. ವಿಚಾರ

*Please cite this article as:* *ವಿಠಲ.* (2022). ಶಿವಶರಣ ಪಾಟೀಲ ಜಾವಳಿಯವರ ಕಾವ್ಯಗಳಲ್ಲಿ ಜನಪರ ಕಾಳಜಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 1–5.*

ಭಾರತಿ ಅಧ್ಯಯನ ವೇದಿಕೆ ಹುಟ್ಟು ಹಾಕಿದರು. ಹಾಗೂ ವಿಚಾರ ಭಾರತಿ ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸಿದರು. ಶಿವಶರಣ ಪಾಟೀಲ್ ಜಾವಳಿಯವರು ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಅಧ್ಯಾಪಕರಾಗಿ, ದಕ್ಷ ಆಡಳಿತಗಾರರಾಗಿ ಕಾಯಕವೇ ಕೈಲಾಸ ಎನ್ನುವ ಹಾಗೆ ತಮ್ಮ ಕರ್ತವ್ಯದಲ್ಲಿ ನಿಷ್ಠೆಯನ್ನು ಹೊಂದಿದ್ದರು. ಪ್ರತಿಭೆಯ ಕುಲುಮೆಯಿಂದ ಏಳು ಕವನ ಸಂಕಲನಗಳನ್ನು ರಚಿಸಿದ್ದಾರೆ. ಅವುಗಳೆಂದರೆ ಹಾಲು ತೊರೆಯಿಂದ ಉಪ್ಪು ನೀರಿಗೆ, ಹತ್ತರ ಕೊಡ ಹನ್ನೊಂದು, ಪರಿಸ್ಥಿತಿಯ 20 ಮತ್ತು 5 ಕವಿತೆಗಳು, ಮುಗಿಯದ ಕನಸು, ಹಣೆಬರಹದ ಹಾಡು, ಕಾಲಮಾನದ ಕವಿತೆ ಮತ್ತು ಕಾಮಧೇನುವಿನ ಧಾರೆಗಳು

'ಹಾಲು ತೊರೆಯಿಂದ' ಉಪ್ಪು ನೀರಿಗೆ ಈ ಕವನ ಸಂಕಲನವು 1971ರಲ್ಲಿ ಪ್ರಕಟವಾಯಿತು. ಈ ಸಂಕಲನದಲ್ಲಿಯೆ ಹೀಗೆ ಮಾಡಿದ್ದೆವೆ ಎಂಬ ಕವಿತೆಯಲ್ಲಿ ವಂಚನೆಯ ವ್ಯಹಾರವನ್ನು ಕುರಿತು ವಿಡಂಬನೆ ಇದೆ. ಮಂಗ ಮತ್ತು ಮೊಸಳೆಯ ಕಥೆಯನ್ನು ವಸ್ತುವಾಗಿ ತೆಗೆದುಕೊಂಡಿದ್ದಾರೆ. ಎಲ್ಲಿ ನೋಡಿದ್ದರಲ್ಲಿ ಮೋಸ ವಂಚನೆ ನಡೆಯುತ್ತಿದ್ದನ್ನು ಕಂಡು ಕನಿಕರ ವ್ಯಕ್ತಪಡಿಸುತ್ತಾರೆ. ಸಮಾಜಕ್ಕೆ ಧೈರ್ಯವನ್ನು ತುಂಬುವಂತ ಕಾರ್ಯವನ್ನು ಮಾಡಿದ್ದಾರೆ. "ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆಂತಯ್ಯ" ಎನ್ನುವ ವಚನದಂತೆ ಸಮಾಜದಲ್ಲಿ ನಾವು ಬದುಕುವಾಗ ಹಲವಾರು ತೊಂದರೆಗಳು ಸಮಸ್ಯೆಗಳು ನಮ್ಮನ್ನು ಕಾಡುತ್ತಿರುತ್ತವೆ. ಅವುಗಳನ್ನು ಮೆಟ್ಟಿನಿಂತು ಗಟ್ಟಿ ಧೈರ್ಯ ಮಾಡಿಕೊಂಡು ಸಮಾಜದಲ್ಲಿ ಬದುಕಬೇಕು ಎನ್ನುವ ಆಸೆ ಕವಿಯದು.

ಫಣಿ ಎಂಬ ಕವಿತೆಯಲ್ಲಿ ಹೆಣ್ಣಿನ ಮಹತ್ವವನ್ನು ತಿಳಿಸುವಂತಹ ಕಾರ್ಯವನ್ನು ಮಾಡಿದ್ದಾರೆ. "ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ" ಹೆಣ್ಣಿದ್ದ ಮನೆಗೆ ಕನ್ನಡಿ ಯಾತಕ್ಕ ಎನ್ನುವ ಹಾಗೆ ಹೆಣ್ಣಿನ ಮನಸ್ಸು ಕೋಮಲ ಅಷ್ಟೇ ಕಠೋರವು ಕೂಡ ಆಗಿರುತ್ತದೆ. ಒಲಿದರೆ ನಾರಿ ಮುನಿದರೆ ಮಾರಿ ಎಂಬಂತೆ ಸ್ತ್ರೀ ಮುನಿದರೆ ವ್ಯಕ್ತಿಯ ಭವಿಷ್ಯ ಆಗೋ ಗತಿಯಾಗುವುದು, ಅದಕ್ಕಾಗಿ ಹೆಣ್ಣಿನ ಮನಸ್ಸು ಅರ್ಥ ಮಾಡಿಕೊಂಡ ಪುರುಷ ನಡೆದರೆ ಸಂಸಾರ ಸ್ವರ್ಗದ ಹಾಗೆ ಆಗುವುದು ಎಂದು ಕವಿ ಕಳಕಳಿಯ ವಾಣಿಯನ್ನು ನುಡಿದಿದ್ದಾರೆ.

"ಹೆಣ" ಕವಿತೆಯಲ್ಲಿ ಅಧಿಕಾರದ ದುರುಪಯೋಗದ ಬಗ್ಗೆ ವಿವರಿಸುತ್ತಾರೆ. ಪ್ರತಿಷ್ಠಿತ ವ್ಯಕ್ತಿಯೊಬ್ಬರೂ ತೀರಿಕೊಂಡಾಗ ಅವರ ಆಪ್ತರು ಹಳಹಳಿಸಿ ಆ ವ್ಯಕ್ತಿಯ ಹೊರತು ನಾವು ಬದುಕುವುದಿಲ್ಲ ಎಂದು ಹೆಣವನ್ನು ಉಳಿಸಿಕೊಳ್ಳಬೇಕೆಂದು ನಿರ್ಧಾರ ಮಾಡಿ ಅದಕ್ಕೆ ಗಂಧದ ಎಣ್ಣೆ ಸಿಂಪಡಿಸಿ ಹೆಣದ ವಾಸನೆ ಎಷ್ಟು ಪರಿಮಳವಾಗಿದೆ ಎಂದು ಕುಣಿದು ಕುಪ್ಪಳಿಸಿದರು. ಜನರು ಹೆಣದ ವಾಸನೆ ಬರುತ್ತಿದೆ ಎಂದು ಹೇಳಿದರು. ಅವರು ಮಾತಿಗೆ ಇಲ್ಲಿ ಮನ್ನಣೆ ಕೊಡದೆ ಅಧಿಕಾರ ಶಾಯಿಗಳು ತಮ್ಮ ಮನ ಬದಂತೆ ವರ್ತನೆ ತೋರಿದರು. ಅಲ್ಲಿಯ ಸೇರಿದ ಜನರು ಅಧಿಕಾರದ ದರ್ಪದ ಮುಂದೆ ಸಾಮಾನ್ಯ ಜನರ ಮಾತಿಗೆ ಬೆಲೆ ಸಿಗಲಿಲ್ಲ ಎನ್ನುವುದು ಕವಿಯ ಸಾಮಾಜಿಕ ಕಳಕಳಿಯನ್ನು ಎತ್ತಿ ತೋರಿಸಿದ್ದಾರೆ.

"ಆಫೀಸಿನ" ಮನುಷ್ಯ ಎಂಬ ಕವಿತೆಯ ಕಛೇರಿಯಲ್ಲಿ ಕಾರ್ಯನಿರ್ಹಿಸುವ ವ್ಯಕ್ತಿಯ ಭ್ರಷ್ಟಾಚಾರವನ್ನು ಬಯಲಿಗೆ ಎಳೆಯುವ ತಂತ್ರ ಅದ್ಭುತವಾಗಿ ಮೂಡಿ ಬಂದಿದೆ. ಪ್ರತಿ ತಿಂಗಳು ಅವನಿಗೆ ಸರಕಾರದಿಂದ ಸಂಬಳ ಬರುತ್ತಿದ್ದರು ಕೂಡ ಅವನ ದುರಾಸೆಯ ಲಂಚದಿಂದ ಬಂದ ಹಣದಿಂದ ಐಷಾರಾಮಿ ಜೀವನ ನಡೆಸಿ ಸರಕಾರಕ್ಕೆ ಮತ್ತು ಸಮಾಜದ ಮುಗ್ದ ಜನರನ್ನು ಮೋಸ ಮಾಡಿ ಹಣ

ಸಂಪಾದನೆ ಮಾಡುವ ರೀತಿ ನೋಡಿದರೆ ಬೆಚ್ಚಿ ಬೀಳುವಂತಹದ್ದು ಎಂದು ಕವಿ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಸಮಾಜದ ಬಗ್ಗೆ ಕನಿಕರ ತೋರಿದ್ದಾರೆ. ಹಾಗೆಯೇ ಕಚೇರಿಯ ವಾಹನದಲ್ಲಿ ತಮ್ಮ ವೈಯಕ್ತಿಕ ಕೆಲಸ ಆಗಬೇಕು ಮನೆಯ ಮಂದಿಗೆ ಹೊಸ ಬಣ್ಣ ಹೊಸ ಚರ್ಮ ಅದೇ ಬ್ಯಾಂಕಿನಿಂದ ಬರಬೇಕು ಎಂದು ಕವಿ ಹೇಳುವುದರೊಂದಿಗೆ ಸಾಮಾಜಿಕ ಕಾಳಜಿ ಈ ಕವಿತೆಯಲ್ಲಿ ಮೂಡಿ ಬಂದಿದೆ.

***ಹೆಣ್ಣೊಂದು ಬಾಳಿನ ಕಣ್ಣು***

***ಹೆಣ್ಣಿಂದ ಬಾಳೇ ಹೊನ್ನೂ***

***ವರದಕ್ಷಿಣೆ ಭೂತ ಬಡಿದಾಗ ಆ ಹೆಣ್ಣು***

***ಮನೆತನಕ್ಕೆ ಆಯಿತು ಹುಣ್ಣು***

ಕವಿ ವರದಕ್ಷಣೆಯ ಕ್ರೌರ್ಯವನ್ನು ಹೆಣ್ಣಿನ ಜೀವನ ದುಸ್ಥಿತಿಯನ್ನು ಆಕೆಯ ಮೇಲೆ ನಡೆಯುವ ದೌರ್ಜನ್ಯವನ್ನು ಕುರಿತು ಬರೆಯುತ್ತಾರೆ. 'ವಸ್ತ್ರಾಪಹರಣ' ಕವಿತೆಯಲ್ಲಿ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯ ಇಂದು ನಿನ್ನೆಯದಲ್ಲ ದುಷ್ಟ ಜನರ ಸಂತತಿ ಇರುವವರೆಗೂ ಸಾಗುವಂತದ್ದು ಎನ್ನುತ್ತಾರೆ. 70ರ ದಶಕದ ನಂತರ ಕನ್ನಡ ಕಾವ್ಯ ಪ್ರಪಂಚಕ್ಕೆ ಕಾಲಿಟ್ಟಿದ್ದಾರೆ. ಮನಸ್ಸಿನ ಹೊಯ್ದಾಟ, ನೋವು, ಸಮಸ್ಯೆಗಳು ದೌರ್ಜನ್ಯ ಅಸಮಾನತೆ ಮುಂತಾದ ವಿಷಯಗಳನ್ನು ಹೇಳಲು ಬಂಡಾಯ ಧೋರಣೆಯು ಅವರಿಗೆ ಧೈರ್ಯ ತಂದುಕೊಟ್ಟಿದೆ. ಪಾಶ್ಚಾತ್ಯ ಚಿಂತನೆಯ ಸ್ತ್ರೀವಾದ ಕುರಿತು ಆಲೋಚನೆಗಳು, ಹೆಣ್ಣಿಗೆ ತನ್ನ ಹೊಸ ಹೊಸ ವಿಚಾರಧಾರೆಗಳು ಗುರುತಿಸಿಕೊಳ್ಳಲು ಕಾರಣವಾಗಿದೆ.

***ನಾವು ಎತ್ತಿನ ಜಾತಿಯವರು***

***ಸಾಲು ದಾವಣಿಯಲ್ಲಿ ಚಿಪಾಟಿ ತಿನ್ನುವರು,***

***ಇಲ್ಲ ಹೆಗಲ ಮೇಲ ನೊಗ ಹೇರಿಕೊಂಡು ರಂಟಿ ಎಳೆಯುವವರು***

ನಾವು ಮತ್ತು ಅವರು ಕವಿತೆಯಲ್ಲಿ ಹಳ್ಳಿಗರ ಬದುಕನ್ನು ಮನ ಮುಟ್ಟುವಂತೆ ಚಿತ್ರಿಸಿದ್ದಾರೆ. ನಮ್ಮ ಪ್ರದೇಶದ ಹಳ್ಳಿಯ ಜನರ ಬದುಕಿನ ಕಷ್ಟ ಕಾರ್ಪಣ್ಯಗಳು ಅಜ್ಞಾನ ಮೌಢ್ಯತೆಗಳ ಚಿತ್ರಣ ಮೂಡಿ ಬಂದಿದೆ. ಹಳ್ಳಿಯ ಬದುಕಿನ ಹೆಣ್ಣು ಗಂಡುಗಳೂ ಎಲ್ಲಾ ರೀತಿಯ ಜಾತಿ ಮತಗಳು ದೀನದಲಿತರು ಒಂದೇ ಸ್ತರದಲ್ಲಿ ದಾರಿದ್ರ್ಯದ ಕೆಳಮಟ್ಟದಲ್ಲಿ ಬದುಕು ಸಾಗಿಸುತ್ತಾರೆ.

ಹಳ್ಳಿಗಳಲ್ಲಿ ಗೌಡ, ಶೆಟ್ಟಿ, ದೇಸಾಯಿ, ಸಾಹುಕಾರ ಈ ಶ್ರೇಣಿಯವರು ಮಾತ್ರ ಐಷಾರಾಮಿ ಜೀವನ ಸಾಗಿಸುತ್ತಿದ್ದು, ಹಲವಾರು ಸೌಲಭ್ಯಗಳನ್ನು ಪಡೆಯುತ್ತಾ ಬಡವರ ಸೌಲಭ್ಯ ವಂಚಿಸುತ್ತಾ ಜೀವನ ಸಾಗಿಸುವರು. ಉಳಿದ ಬಹುಪಾಲು ಜನರ ಬದುಕೆಂದರೆ ಹೀನಾಯ ಸ್ಥಿತಿ, ದನಗಳಲ್ಲಿ ದನಗಳಾಗಿ ನಾಯಿಯಂತೆ ಎತ್ತು ಕತ್ತೆಗಳಂತೆ ಇವರ ಬಾಳು ಇರುತ್ತದೆ. ಮೈ ತುಂಬ ಬಟ್ಟೆ ಇಲ್ಲ ಹೊಟ್ಟೆ ತುಂಬಾ ಅನ್ನವಿಲ್ಲ ಮಲಗಲು ಒಳ್ಳೆಯ ಮನೆ ಇಲ್ಲ ಎಂದು ಸಾಮಾಜಿಕ ಕಳಕಳಿಯನ್ನು ತೋರಿದ್ದಾರೆ. ಬಡವರ ಬದುಕು ಬಂಗಾರವಾಗಬೇಕು ಎನ್ನುವ ಆಶಾಭಾವ ಕವಿಗಿದೆ. ನಮ್ಮ ದೇಶ ಸ್ವಾತಂತ್ರ್ಯ ಪಡೆದು ಹಲವು ದಶಕಗಳು ಸಾಗಿಸಿದರು ಪ್ರಜಾಪ್ರಭುತ್ವದ ಹೆಸರಿನಲ್ಲಿ ನಮ್ಮ ದೇಶ ಎಷ್ಟು ಬೆಳೆಯಬೇಕಾಗಿತ್ತು. ಆದರೆ ಅಷ್ಟರ ಮಟ್ಟಿಗೆ ಬೆಳೆಯಲಿಲ್ಲ. ಹಳೆಯ ಬೇರುಗಳೇ ಮತ್ತೆ ಮತ್ತೆ ಬೇರೆ ವೇಷ ಹಾಕಿಕೊಂಡು ಮೊಳಕೆ ಒಡೆದು

ತಮ್ಮ ಶೋಷಣೆಯ ಮಾರ್ಗಗಳನ್ನು ಹಿಡಿದು ಪ್ರಜಾಪ್ರಭುತ್ವದ ನೆಲೆಯಲ್ಲಿ ಸಾಧಿಸುತ್ತಿರುವುದು ಈ ದೇಶದ ಒಂದು ದೊಡ್ಡ ದುರಂತವಾಗಿದೆ. ದೇಸಾಯಿ, ಗೌಡ, ಶೆಟ್ಟಿ, ಶಾನುಭೋಗರ ಹೊಲ ಮನೆ ಗದ್ದೆಗಳಲ್ಲಿ ಹರಿದ ಸೀರೆಯಲ್ಲಿ ತೊಡೆ ತೆರೆದುಕೊಂಡು ಇವರ ಹೆಂಗಸರು ಸರಿಕರ ಜೊತೆಯಲ್ಲಿ ಕೂಲಿ ಕೆಲಸ ಮಾಡುತ್ತಾರೆ. ಕಟ್ಟಿಗೆ ಕುಳ್ಳು ಆಯುತ್ತಾರೆ, ಸಂತೆಗೆ ಒಟ್ಟಿ ಹೋಗುತ್ತಾರೆ. ಚಿಂದಿಮುಡಿಯಲ್ಲಿ ಹಳಸಿದ್ದನ್ನು ಎತ್ತಿ ನೀಡಿಸಿಕೊಂಡು ಮುಸುತೆ ತಟ್ಟಿ ಸಿಕ್ಕುತ್ತಾರೆ. ಹಳ್ಳಿಯ ಮುಗ್ಧರು ಅವರ ಹೆಂಡರು ಮಕ್ಕಳು ಹೊಲ ಗದ್ದೆಗಳಲ್ಲಿ ತೆರೆದ ಮೈಯವರಾಗಿ ದುಡಿದು ಬಾಳುತ್ತಿರುವ ದೀನ ಸ್ಥಿತಿಯ ಚಿತ್ರಣ ಕಾಣುತ್ತೇವೆ. ಹಳ್ಳಿಯ ಸರಳ ಜೀವನವನ್ನು ನಡೆಸುವ ರೈತರ, ಕಾರ್ಮಿಕರ ಬದುಕಿನ ಬವಣೆಯನ್ನು ಕಣ್ಣಿಗೆ ಕಟ್ಟುವಂತೆ ತಮ್ಮ ಕಾವ್ಯಗಳಲ್ಲಿ ತಂದು ಸಮಾಜವನ್ನು ಎಚ್ಚರಿಸುವ ಕಾರ್ಯವನ್ನು ಮಾಡಿದ್ದಾರೆ. ಕಾವ್ಯ ಸಂವೇದನೆ ಎನ್ನುವುದು ಸಂವಹನಕ್ಕೆ ಜೊತೆ ಕೊಡದೆ. ಹೋದಲ್ಲಿ ಕಾವ್ಯದ ಉದ್ದೇಶ ಸಫಲವಾಗುವುದಿಲ್ಲ. ಹಾಗೆಂದೇ ಈ ಕವಿಯ ಕಲ್ಪನೆಯಲ್ಲಿ ಜನ ಸಮ್ಮುಖವಾಗಬೇಕೆಂದು ಯಾರನ್ನು ಕುರಿತು ಮಾತನಾಡುತ್ತಿವೆಯೇ ಅವರಿಗೆ ಅದು ಮುಟ್ಟಬೇಕೆಂಬ ವಿಚಾರವಿರುವುದು.

***ಜೋಯಿಸ ರಂಗಪ್ಪೋರು***
***ಯಥಾಪ್ರಕಾರ ಮಾಮೂಲು ಪಡೆದು,***
***ಹೊತ್ತಿಗೆ ತೆಗೆದು ಗುಣಿಸಿಟ್ಟ ಜಾತಕದಲ್ಲಿ***
***ನಮ್ಮೂರ ಹೊಲಗೇರಿಯ ಹಣೆ ಬರದ ಹಾಡು ಬರೆದವರು.***

'ಹಣೆಬರದ ಹಾಡು' ಕವಿತೆಯಲ್ಲಿ ಶೋಷಣೆಯ ಮೂಲಗಳು ಕಣ್ಮುಂದೆ ಬರುತ್ತವೆ. ಸ್ವಾತಂತ್ರ್ಯದ ಅನಂತರ ರಂಗಪ್ಪನಂತವರು ಹಳ್ಳಿಯ ಮುಗ್ಧರ ಬದುಕಿನ ಹಣೆಬರಹ ಬರೆದರು. ಉದ್ಧೇಶಪೂರ್ವಕವಾಗಿ ನೌಕರಿ ಚಾಕರಿ ವ್ಯಾಪರ ಉದ್ಯಮಗಳನ್ನೆಲ್ಲ ಕೈಯಲ್ಲಿಟ್ಟುಕೊಂಡು ಸಮಸ್ತ ಅಧಿಕಾರ ಸಂಪತ್ತನ್ನೆಲ್ಲ ಕೊಳ್ಳೆ ಹೊಡೆದು, ಬಡವರ ತುಟಿಗೆ ಜೇನುತುಪ್ಪ ಹಚ್ಚುವ ರೀತಿಯಲ್ಲಿ ಕಾರ್ಯವನ್ನು ಹೊಗಳುತ್ತ, ಅವಳು ಅವನ ತಲೆಗೆ ಹರಿಯಲಾಗದ ದೊಡ್ಡ ಟೋಪ್ಪಿಗೆ ಹಾಕಿದವರು. ಈ ಜನ ತಮ್ಮ ವಿಚಾರಬಲ, ಶಿಕ್ಷಣದ ಬಲ, ತಂತ್ರ ಬಲಗಳ ಮೂಲಕ ದಲಿತರಿಗೆ ಕೇವಲ ನೆಲ ಉಳುವುದನ್ನೇ ಮಣ್ಣೆತ್ತುದನ್ನೇ ಬಿಟ್ಟುಕೊಟ್ಟು ತಾವು ದಲ್ಲಾಳಿಗಳು ಆಗುತ್ತಾ ನೌಕರಿ ಚಾಕರಿ ವ್ಯಾಪಾರಗಳನ್ನು ತಮ್ಮ ಕೈಯಲ್ಲಿ ಹಿಡಿದುಕೊಂಡು ಅವರನ್ನು ಪರೋಕ್ಷ ರೀತಿಯಲ್ಲಿ ತುಳಿಯುತ್ತಿರುವವರು.

***ತಮ್ಮಂಥ ಘನ***
***ಅಸಂಖ್ಯಾತ ದೀಪಾವಳಿಗಳಿದರಲಿ***
***ಕರಗಿ ಹೋದದ್ದು ಗೊತ್ತು.***
***ಆದರೂ ಅದರ ಮುಂದೆ ನಾನೇನು ಮಾಡಬಲ್ಲೆನೆಂದು***
***ಕೈ ಕೊಡಹಿಕುಳಿತವನಲ್ಲ.***
***ಶಕ್ತಿ ಇದ್ದರಷ್ಟರಲೆ ಹೋರಾಡಿ ಶ್ರಮಿಸಿ***
***ಕೊನೆಗೆ ದೀಪ ಹಚ್ಚಿದ್ದೇನೆ,***
***ಬೆಳಕು ಮಾಡಿದ್ದೇನೆ.***

'ಆತ್ಮವಿಶ್ವಾಸ' ಕವಿತೆಯಲ್ಲಿ ಕತ್ತಲು ಘನವಾದದ್ದು ಇದರಲ್ಲಿ ಹಲವಾರು ದೀಪಾವಳಿಗಳು ಕರಗಿ ಹೋಗಿವೆ. ಆದರೆ ನಾನೇನು ಮಾಡಲಿಲ್ಲವೆಂದು ಸುಮ್ಮನೆ ಕೈ ಕಟ್ಟಿ ಕೂಡುವ ಮನುಷ್ಯ ನಾನಲ್ಲ. ನನ್ನ ಕೈಲಾದಷ್ಟು ಶ್ರಮವಹಿಸಿ ಜ್ಯೋತಿ ಹಚ್ಚಿದ್ದೇನೆ. ನಂದಿ ಹೋಗದಂತೆ ಅಡ್ಡಲಾಗಿ ಕೈ ಹಿಡಿದು ರಕ್ಷಿಸಿದ್ದೇನೆ. ಇಡೀ ದೇಶಕ್ಕೆ ಬೆಳಕನ್ನು ಕೊಡುವ ಉದ್ದೇಶವು ನನ್ನಲ್ಲಿಲ್ಲ. ಹೆಂಡತಿ, ಮಕ್ಕಳು ಒಂದಿಷ್ಟು ಆತ್ಮೀಯರಿಗೆ ದೀಪದ ಬೆಳಕು ಮೂಡಿದರೆ ಸಾಕು. ಅದರ ಬೆಳಕಿನಲ್ಲಿ ಹಾಯಾಗಿ ಕಣ್ಣು ಬಿಟ್ಟು ಹೆಜ್ಜೆ ಇಡುವಂತಹ ಆತ್ಮವಿಶ್ವಾಸ ಕವಿ ಪಡೆದಿದ್ದಾರೆ.ಜ್ಯೋತಿ ಹಚ್ಚುವುದು ಮಾತ್ರ ಆಗಬಾರದು ಅದನ್ನು ಇನ್ನೊಬ್ಬರಿಗೆ ಅಂದಕಾರವನ್ನು ತೊರೆದು ಹಾಕುವಂತಹ ಕಾರ್ಯಮಾಡಬೇಕು ಎಂದು ಕವಿ ಆಶಿಸುತ್ತಾರೆ.

ಮಾನವ ನೆಮ್ಮದಿಯಾಗಿ, ಸುಂದರವಾಗಿ ಜೀವನ ಸಾಗಿಸುವುದಕ್ಕೆ ಬದುಕು ಕಟ್ಟಿಕೊಳ್ಳುವುದಕ್ಕೆ ಆತ್ಮವಿಶ್ವಾಸ ಬಹಳ ಪ್ರಮುಖವಾದದ್ದು. ಆತ್ಮವಿಶ್ವಾಸವಿದ್ದರೆ ಆಕಾಶವೇ ಅಂಗೈಯಲ್ಲಿ ಎನ್ನುವ ಮಾತಿನಂತೆ ಆತ್ಮವಿಶ್ವಾಸ ಮಾನವನಿಗೆ ಜೀವನದಲ್ಲಿ ಒಂದು ದೃಢವಾದ ಹೆಜ್ಜೆ ಇಡುವುದಕ್ಕೆ ಸಾಧ್ಯವಾಗುವುದು. ಆದ್ದರಿಂದ ಮಾನವ ಆತ್ಮವಿಶ್ವಾಸದಿಂದ ಬಾಳಬೇಕು ಎನ್ನುವುದು ಸಾಮಾಜಿಕ ಕಳಕಳಿಯಾಗಿದೆ. ಬಾಳು ಘನರೂಪದ ಕತ್ತಲಲ್ಲಿದ್ದರೂ ಅದಕ್ಕೆ ಜೀವನವೆಂಬ ಬೆಳಕಿನ ದೀಪ ಹಚ್ಚಲು ಆತ್ಮವಿಶ್ವಾಸ ಬೇಕು. ಮಾನವನಿಗೆ ಕ್ಷಣಕ್ಕೂ ಕ್ಷಣಕ್ಕೂ, ನಿಮಿಷ ನಿಮಿಷಕ್ಕೆ ಸಮಸ್ಯೆಗಳು ಬಂದು ನಮ್ಮ ನೆಮ್ಮದಿ ಹಾಳು ಮಾಡುತ್ತಿರುತ್ತವೆ. ನಾವು ತಾಳ್ಮೆಯಿಂದ, ಆತ್ಮವಿಶ್ವಾಸದಿಂದ ಬರುವ ಸಮಸ್ಯೆಗಳನ್ನು ಮೆಟ್ಟಿನಿಂತು ಮುನ್ನುಗ್ಗಬೇಕು ಎಂದು ಕವಿ ಸಾಮಾಜಿಕ ಕಳಕಳಿ ಎತ್ತಿ ತೋರಿಸುತ್ತದೆ.

**ಉಪಸಂಹಾರ**

ಹೀಗೆ ಶ್ರೀ ಶಿವಶರಣ ಜಾವಳಿ ಪಾಟೀಲ್ ಕಲಬುರ್ಗಿ ಭಾಗದ ಬಹುದೊಡ್ಡ ಗಣ್ಯಕವಿ. ಶರಣ ಮಾರ್ಗದಲ್ಲಿ ನುಡಿದಂತೆ ನಡೆದು ಆಧುನಿಕ ಕಾವ್ಯ ಲೋಕಕ್ಕೆ ಹೊಸ ರೂಪ ನೀಡಿದರು. ಗ್ರಾಮೀಣ ಜೀವನ, ರೈತ, ದಲಿತ, ಶೋಷಿತರ ಧ್ವನಿಯಾಗಿ ಸಾಮಾಜಿಕ ಕಳಕಳಿ ತೋರಿದರು. ಅವರು ಇನ್ನಷ್ಟು ಕಾಲ ಬದುಕಿದ್ದರೆ ಇನ್ನೂ ಕಾವ್ಯ ಲೋಕ ಹೊಸ ರೂಪವನ್ನು ಪಡೆಯುತ್ತಿತ್ತು. ಆದರೆ ವಿಧಿ ಅವರಿಗೆ ಈ ಕಾರ್ಯ ನೆರವೇರಿಸುವುದಕ್ಕೆ ಬಿಡಲಿಲ್ಲ.

**ಪರಾಮರ್ಶನ ಗ್ರಂಥಗಳು**


- ಜಾವಳಿ ಸಮಗ್ರ ಕಾವ್ಯ. (1998). ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೊಂಟದಾರ್ಯ ಸಂಸ್ಥಾನ ಮಠ, ಗದಗ.
- ಮುಗಳಿ. ರಂ.ಶ್ರೀ. (2015). ಕನ್ನಡ ಸಾಹಿತ್ಯ ಚರಿತ್ರೆ. ಸಮಾಜ ಪುಸ್ತಕಾಲಯ, ಧಾರವಾಡ.
- ಕನ್ನಡ ಕಿರಣ. (2022). ಪ್ರಸಾರಾಂಗ, ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.
- ಕಲಬುರಗಿ ಜಿಲ್ಲಾ ದರ್ಶನ. (2005). ಪ್ರಸಾರಂಗ, ಗುಲ್ಬರ್ಗ ವಿಶ್ವವಿದ್ಯಾಲಯ, ಕಲಬುರಗಿ.